## ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಸ್ಪೆಷಲ್ ಕೇಸ್ (ಎಸ್.ಸಿ./ಎಸ್.ಟಿ.) ನಂ.23/2024

**ಪಿರ್ಯಾದಿ** - ಸರ್ಕಾರದ ಪರವಾಗಿ **ಚಿಕ್ಕಜಾಜೂರು** ಪೊಲೀಸರು

- ವಿರುದ್ಧ -

**ಆರೋಪಿಗಳು** -

1 ) **ರವಿ ಅಲಿಯಾಸ್ ರವಿಕುಮಾರ್ ತಂದೆ ರಂಗನಾಥಪ್ಪ** ,
24 ವರ್ಷ,

2 ) **ಮಂಜುಳ ಕೋಂ ರಂಗಸ್ವಾಮಿ**,
45 ವರ್ಷ,

3 ) **ಅಜ್ಜಯ್ಯ ತಂದೆ ರೇವಣಸಿದ್ದಪ್ಪ**,
29 ವರ್ಷ,

**ಎ-1 ರಿಂದ 3 ನೇ ಆರೋಪಿಗಳು**
**ವಾಸಃ ಶಿವಪುರ ಗ್ರಾಮ ,**
**ಹೊಳಲ್ಕೆರೆ ತಾಲ್ಲೂಕು ,**
**ಚಿತ್ರದುರ್ಗ ಜಿಲ್ಲೆ ,**

## —:: ದೋಷಾರೋಪಣೆ ::—

**ಶ್ರೀ ಗಂಗಾಧರ ಚನ್ನಬಸಪ್ಪ ಹಡಪದ**, ***ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*** *ಚಿತ್ರದುರ್ಗ* ಆದ ನಾನು

**ರವಿ ಅಲಿಯಾಸ್ ರವಿಕುಮಾರ್, ಮಂಜುಳ ಕೋಂ ರಂಗಸ್ವಾಮಿ, ಅಜ್ಜಯ್ಯ ತಂದೆ ರೇವಣಸಿದ್ದಪ್ಪ ಆದ** ನಿಮ್ಮನ್ನು ಈ ಕೆಳಕಂಡ ಆರೋಪಣೆಗೆ ಒಳಪಡಿಸುತ್ತೇನೆ.

1 ನೇ ಆರೋಪಿತನು ಮೃತ ವೆಂಕಟೇಶನ ಹೆಂಡತಿ ಬಾಸಾ -22 ಇವರೊಂದಿಗೆ ಅನೈತಿಕ ಸಂಬಂಧ ಇಟ್ಟುಕೊಂಡಿದ್ದರ ಬಗ್ಗೆ ಸಂಶಯದ ವಿಚಾರದಲ್ಲಿ 1 ನೇ ಆರೋಪಿ ಮತ್ತು ವೆಂಕಟೇಶ ಇವರ ನಡುವೆ ಗಲಾಟೆಯಾಗುತ್ತಿದ್ದು, ಬಾಸಾ -22 ವೆಂಕಟೇಶನನ್ನು ಬಿಟ್ಟು ತವರು ಮನೆಯಲ್ಲಿ ವಾಸವಾಗಿದ್ದು ದಿಃ 18.04.2024 ರಂದು ಹೊಳಲ್ಕೆರೆ ತಾಲ್ಲೂಕು , ಶಿವಪುರ ಗ್ರಾಮದಲ್ಲಿ ಆಂಜನೇಯ ಸ್ವಾಮಿ ತೇರು ಇದ್ದು ಅದೇ ದಿನ ಸಂಜೆ 7.00 ಗಂಟೆಗೆ ವೆಂಕಟೇಶನು ತನ್ನ ಮನೆ ಸಮೀಪ ಇರುವ ವಾಲ್ಮೀಕಿ ಭವನದ ಮುಂಭಾಗದ

ಸಾರ್ವಜನಿಕ ರಸ್ತೆಯಲ್ಲಿ ನಿಂತು ತೇರಿನ ದಿನ ನನ್ನ ಮನೆಯಲ್ಲಿ ಹೆಂಡತಿ ಮಕ್ಕಳು ಇಲ್ಲದ ಹಾಗೆ ಮಾಡಿದ್ದಾರೆ ಎಂದು ತನ್ನಷ್ಟಕ್ಕೆ ತಾನೇ ಜೋರಾಗಿ ಕೂಗಾಡುತ್ತಾ ಬೈದಾಡುತ್ತಿರುವುದನ್ನು ಕೇಳಿಕೊಂಡ 1 ರಿಂದ 3 ನೇ ಆರೋಪಿತರು ವೆಂಕಟೇಶನಿಗೆ ನಾಯಕ ಸೂಳೇ ಮಗನೇ , ಬೋಳಿ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು , ಹೊಡೆದಿದ್ದು ಅಲ್ಲೆ ಬಿದಿದ್ದ ಕೋಲಿನಿಂದ 1 ನೇ ಆರೋಪಿತನು ವೆಂಕಟೇಶನ ಎದೆಗೆ , ಸೊಂಟಕ್ಕೆ , ಬೆನ್ನಿಗೆ ಹೊಡೆದಿದ್ದು, ದಿಃ 19.04.2024 ರಂದು ಬೆಳಗ್ಗೆ 8.00 ಗಂಟೆಗೆ ಸದರಿ ಗಲಾಟೆ ವಿಚಾರದಲ್ಲಿ ರಾಜಿ ಮಾಡಿಕೊಳ್ಳುವ ನೆಪ ಇಟ್ಟುಕೊಂಡು ಆರೋಪಿತರು ಶಿವಪುರ ಗ್ರಾಮದ ವಾಲ್ಮೀಕಿ ಭವನದ ಮುಂಭಾಗ ವೆಂಕಟೇಶನ ವಾಸದ ಮನೆಗೆ ಹೋಗಿ ಆತನೊಂದಿಗೆ ಜಗಳ ತೆಗೆದು ಆರೋಪಿತರು ವೆಂಕಟೇಶನಿಗೆ ಕೈ ಕಾಲುಗಳಿಂದ ಹೊಡೆದಿದ್ದು , ಸದರಿ ರೀತಿ ಹೊಡೆದರೆ ವೆಂಕಟೇಶನು ಸಾಯಬಹುದು ಎಂದು ಗೊತ್ತಿದ್ದರೂ ಕೂಡ ಅವನ ಮೇಲೆ ಹಲ್ಲೆ ಮಾಡಿ ಆತನ ಸಾವಿಗೆ ಕಾರಣರಾಗಿದ್ದು ಅಪರಾಧಿಕ ನರಹತ್ಯೆಯನ್ನು ಮಾಡಿ , **ನನ್ನ ಸಂಜ್ಞಾನಕ್ಕೆ ಬರುವ ಭಾರತೀಯ ದಂಡ ಸಂಹಿತೆ 304(2)** ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದೀರಿ .

2. ಆರೋಪಿತರಾದ ನೀನು ಮೃತ ವೆಂಕಟೇಶ ನಾಯಕ ಜನಾಂಗದವರು ಎಂದು ಗೊತ್ತಿದ್ದರೂ ಕೂಡ ಸಹ ಅವನ ಮೇಲೆ ಹಲ್ಲೆ ಮಾಡಿ **ನನ್ನ ಸಂಜ್ಞಾನಕ್ಕೆ ಬರುವ ಎಸ್ ಸಿ /ಎಸ್ ಟಿ ದೌಜನ್ಯ ತಡೆ ಕಾಯಿದೆ 3 (2) (V)** ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದೀರಿ .

**(ಗಂಗಾಧರ ಚನ್ನಬಸಪ್ಪ ಹಡಪದ)**

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,

ಚಿತ್ರದುರ್ಗ.

**ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ**

**ಸ್ಪೆಷಲ್ ಕೇಸ್ (ಎಸ್.ಸಿ./ಎಸ್.ಟಿ.) ನಂ.23/2024**

**ಪಿರ್ಯಾದಿ** - ಸರ್ಕಾರದ ಪರವಾಗಿ **ಚಿಕ್ಕಜಾಜೂರು** ಪೊಲೀಸರು

**- ವಿರುದ್ಧ -**

**ಆರೋಪಿಗಳು** -

1) **ರವಿ ಅಲಿಯಾಸ್ ರವಿಕುಮಾರ್** ,
24 ವರ್ಷ,

2) **ಮಂಜುಳ ಕೋಂ ರಂಗಸ್ವಾಮಿ**,
45 ವರ್ಷ,

3) **ಅಜ್ಜಯ್ಯ ತಂದೆ ರೇವಣಸಿದ್ದಪ್ಪ**,
29 ವರ್ಷ,

**ಎ-1 ರಿಂದ 3 ನೇ ಆರೋಪಿಗಳು**
**ವಾಸಃ ಶಿವಪುರ ಗ್ರಾಮ ,**
**ಹೊಳಲ್ಕೆರೆ ತಾಲ್ಲೂಕು ,**
**ಚಿತ್ರದುರ್ಗ ಜಿಲ್ಲೆ ,**

## -ದೋಷಾರೋಪಣೆ -

1) ಈಗ ಕನ್ನಡದಲ್ಲಿ ಓದಿ ಹೇಳಿದ ದೋಷಾರೋಪಣೆ ಅರ್ಥವಾಯಿತೇ?

ಉತ್ತರಃ

2) ಈಗ ಓದಿ ಹೇಳಿದ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀಯೇ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ

ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಅವನಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ವಿವರಿಸಿ ಹೇಳಿಲಾಯಿತು ಹಾಗೂ ಆರೋಪಿಯು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು)

**(ಗಂಗಾಧರ ಚನ್ನಬಸಪ್ಪ ಹಡಪದ)**
ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.